# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 002
ದೂರವಾಣಿ ಸಂಖ್ಯೆ: 08192-208029

ಸಂಖ್ಯೆ: ದಾವಿವಿ/ಶೈ/ಸುತ್ತೋಲೆ/356/2017-18 | 3858 ದಿನಾಂಕ:19-08-2017

## ಸುತ್ತೋಲೆ

ವಿಷಯ: ಸ್ನಾತಕ ಪದವಿ ಕೋರ್ಸುಗಳಿಗೆ – ಸಿಬಿಸಿಎಸ್ ಪದ್ಧತಿಯಡಿ 3ನೇ ಸೆಮಿಸ್ಟರ್‌ನಲ್ಲಿ ಅಳವಡಿಸಿರುವ "ಸಾಮಾನ್ಯ ವಿಜ್ಞಾನ" ಮತ್ತು "ನಿರ್ವಹಣೆ" ವಿಷಯಗಳನ್ನು ಬೋಧಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08-08-2017.

******

ವಿಶ್ವವಿದ್ಯಾನಿಲಯದಲ್ಲಿ 2016-17ನೇ ಶೈಕ್ಷಣಿಕ ಸಾಲಿನಿಂದ ಸಿಬಿಸಿಎಸ್ ಸ್ಕೀಂನಲ್ಲಿ ಹೊಸ ಪಠ್ಯಕ್ರಮಗಳನ್ನು ಜಾರಿಗೊಳಿಸಲಾಗಿದ್ದು, ಸದರಿ ಪಠ್ಯಕ್ರಮಗಳಲ್ಲಿನ 3ನೇ ಸೆಮಿಸ್ಟರ್‌ನಲ್ಲಿ **"ಸಾಮಾನ್ಯ ವಿಜ್ಞಾನ"** ಮತ್ತು **"ನಿರ್ವಹಣೆ"** ವಿಷಯಗಳನ್ನು – ಸರ್ಕಾರದ ನಿರ್ದೇಶಾನುಸರ ಕಡ್ಡಾಯ ವಿಷಯವಾಗಿ ಬೋಧಿಸುವ ಬಗ್ಗೆ ಪಠ್ಯಕ್ರಮಗಳನ್ನು ಅಳವಡಿಸಲಾಗಿದೆ. ಈ ವಿಷಯಗಳನ್ನು ಬೋಧಿಸುವ ಕೆಲವು ಕಾಲೇಜುಗಳಿಂದ ಮಾರ್ಗದರ್ಶನ ಕೋರಿ ಪತ್ರಗಳನ್ನು ಪಡೆಯಲಾಗಿದೆ. ಈ ಹಿನ್ನಲೆಯಲ್ಲಿ ಮಾನ್ಯ ಕುಲಪತಿಗಳ ಆದೇಶದಮೇರೆಗೆ ಈ ಕೆಳಕಂಡ ಸ್ಪಷ್ಟೀಕರಣ ನೀಡಲಾಗಿದೆ.

**"ಸಿಬಿಸಿಎಸ್ ಸ್ಕೀಂ ನಲ್ಲಿ 3ನೇ ಸೆಮಿಸ್ಟರ್‌ನಲ್ಲಿ ಅಳವಡಿಸಲಾಗಿರುವ "ಸಾಮಾನ್ಯ ವಿಜ್ಞಾನ" ಮತ್ತು "ನಿರ್ವಹಣೆ" ವಿಷಯಗಳನ್ನು ಆಯಾ ವಿಭಾಗದ ಅಧ್ಯಾಪಕರುಗಳು ಬೋಧಿಸಲು ಅನುಕೂಲವಾಗುವಂತೆ ಪಠ್ಯಕ್ರಮಗಳನ್ನು ಸರಳೀಕರಿಸಿ, ಸಿದ್ಧಪಡಿಸಲಾಗಿರುವುದರಿಂದ ಸಂಬಂಧಪಟ್ಟ ವಿಭಾಗದ ಅಧ್ಯಾಪಕರುಗಳು ಪಠ್ಯಕ್ರಮಗಳನ್ನು ಬೋಧಿಸುವ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಈ ಮೂಲಕ ಪ್ರಾಂಶುಪಾಲರ ಗಮನಕ್ಕೆ ತರಲು ನಿರ್ದೇಶಿತನಾಗಿದ್ದೇನೆ.**

ಆದೇಶಾನುಸಾರ

(ಡಾ॥ ಎಸ್.ವಿ. ಹಲಸೆ)

ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577 002.

**ಇವರಿಗೆ:-**

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

**ಪ್ರತಿ:**

1) ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2) ಎಲ್ಲಾ ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3) ಉಪಕುಲಸಚಿವರು/ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4) ಅಧೀಕ್ಷಕರು, ಆಡಳಿತ/ಪರೀಕ್ಷಾಂಗ ವಿಭಾಗಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5) ಮಾನ್ಯ ಕುಲಪತಿಗಳು/ಕುಲಸಚಿವರ, ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6) ಕಛೇರಿ ಪ್ರತಿ.